
ನಿರೀಕ್ಷೆಯೂ ಇಲ್ಲದೆ ಜೀರ್ಣೋದ್ಧಾರ ಮಾಡುತ್ತಾನೆ. ಮನುಷ್ಯರು ಸ್ವಭಾವತಃ ಒಳ್ಳೆಯವರು. ಅವರೊಳಗಿನ ಕೇಡನ್ನು ಒಳ್ಳೆಯತನದಿಂದಲೇ ಎದುರಿಸಿ ಗೆಲ್ಲಬಹುದು. ಕೆಡುಕಿನ ಸುಳಿಗೆ ಸಿಕ್ಕ ಮನುಷ್ಯರು ಬದಲಾಗುತ್ತಾರೆ ಎಂಬ ಬಲವಾದ ನಂಬಿಕೆ ಈ ಸಂಕಲನದ ಹಲವು ಕಥೆಗಳಲ್ಲಿ ಕಾಣಸಿಗುತ್ತದೆ. ಭೂತಕಾಲವನ್ನು ಕೆಂಡದ ಹಾಗೆ ತನ್ನೊಳಗೆ ಕಟ್ಟಿಕೊಂಡು ತಿರುಗುತ್ತಿರುವ ಲ್ಯಾಂಬ್ಬನ್‌ನ ಎಂಬ ವ್ಯಕ್ತಿಯ ಕಥೆ 'ಸರ್ವೆ ನಂಬರ್ 97'. ಲ್ಯಾಂಬ್ಬನ್ ಎಂಬ ವಿಚಿತ್ರ ಹೆಸರಿನ ಮುಗ್ಧ ವ್ಯಕ್ತಿಯ ಸುತ್ತ ಬೆಳೆಯುತ್ತ ಹೋಗುವ ಈ ಕಥೆ, ಮನುಷ್ಯನೊಳಗಿನ ದುರಾಸೆ, ಅದರಿಂದ ಹುಟ್ಟಿಕೊಳ್ಳುವ ಕ್ರೌರ್ಯ ಮತ್ತು ಅದು ಎಡೆಮಾಡಿಕೊಡುವ ದುರಂತಗಳನ್ನು ಕಟ್ಟಿ ಕೊಡುತ್ತದೆ. ನಿಧಿಯ ಆಸೆಗೆ, ತನ್ನ ಕೆಲಸಗಾರರಿಂದಲೇ ಕೊಲೆಗೀಡಾಗುತ್ತಾನೆ ಲ್ಯಾಂಬ್ಬನ್. ಈ ಸಾವಿನಲ್ಲಿ ನಾನೂ ಪಾಲುದಾರ ಆದೆನೇನೋ ಎಂಬ ಪಶ್ಚಾತ್ತಾಪವೊಂದು ಪ್ರಭಾಳ ಮನಸಲ್ಲಿ ಉಳಿದು ಬಿಡುತ್ತದೆ. ಪ್ರಭಾಳ ಮನಸ್ಸಿನ ಹೊಯ್ದಾಟಗಳು, ಲ್ಯಾಂಬ್ಬನ್‌ನ ತಳಮಳಗಳ ಮೇಲೆ ಬೆಳೆಯಬಹುದಾಗಿದ್ದ ಈ ಕಥೆಯ ಸಾಧ್ಯತೆ, ಇತಿಹಾಸದ ಪುಟಗಳ ರೋಚಕತೆಯಲ್ಲಿ ಮಸುಕಾಗಿಬಿಡುತ್ತದೆ. ದಾಖಲೆಗಳ ಪುಟಗಳಲ್ಲಿ ದೊರೆಯುವ ರೋಚಕ ಮಾಹಿತಿಗಳಿಗೆ ರೋಚಕತೆಯ ಹೊರತಾದ ಮಹತ್ವವೊಂದು ಕಥೆಯೊಳಗೆ ದಕ್ಕಿಲ್ಲ.

ಅನಿಲ್ ಅವರ ಕಥೆಯ ವಸ್ತುಗಳು ವಿಶಿಷ್ಟವೂ, ಸೂಕ್ಷವಾದವೂ ಆಗಿರುತ್ತವೆ. ಆದರೆ ಎಷ್ಟೋ ಸಲ ಅದಕ್ಕೆ ಬೇಕಾದ ಸೂಕ್ಷ್ಮವಾದ ಕಸುಬುಗಾರಿಕೆ ಅಥವಾ ಭಾಷೆಯ ಬಳಕೆಯ ಕೊರತೆಯಿಂದ ಅವು ಬಡವಾಗುತ್ತವೆ. ಇದಕ್ಕೆ ಉದಾಹರಣೆಯಾಗಿ 'ಆತ್ಮಸಾಕ್ಷಿ' ಕಥೆಯನ್ನೇ ನೋಡಬಹುದು. ಪ್ರಾಮಾಣಿಕವಾಗಿ, ಮತ್ತು ಆ ಪ್ರಾಮಾಣಿಕತೆಯ ಕಾರಣಕ್ಕೇ ಭ್ರಷ್ಟ ಮಲಶೆಟ್ಟಿ ಎದುರು ತಲೆ ಎತ್ತಿ ಬದುಕುತ್ತಿದ್ದ ಪೀರಪ್ಪ, ಬಡೇಸಾಬ್ ಕೃತಜ್ಞತಾಪೂರ್ವಕವಾಗಿ ತುರುಕಿ, ಗಡಿಬಿಡಿಯಲ್ಲಿ ಕೈ ಮುಗಿದು ಹೊರಟು ಹೋಗುವ ಎರಡು ಸಾವಿರ ರೂಪಾಯಿ ಹಣದಿಂದ ಅಂತರಂಗದಲ್ಲಿ ಕುಸಿಯುತ್ತಾ ಹೋಗುತ್ತಾನೆ. ತಾನು ಭ್ರಷ್ಟನಾದೆ ಎಂಬ ಭಯ ಅವನ ವ್ಯಕ್ತಿತ್ವವನ್ನೇ ಗೆದ್ದಲು ಹುಳದ ಹಾಗೆ ತಿನ್ನುತ್ತಾ ಬರುತ್ತದೆ. ಲಂಚವೇ ಅವನನ್ನು ಹೇಗೆ ತಿನ್ನುತ್ತ ಹೋಗುತ್ತದೆ ಎಂಬುದನ್ನು ಕಟ್ಟಿಕೊಡಲು ಈ ಕಥೆ ಯತ್ನಿಸುತ್ತದೆ.




**ಸರ್ವೆ ನಂಬರ್**-97
ಲೇ: ಅನಿಲ್ ಗುನ್ನಾಪೂರ
ಪ್ರ: ಹೊಂಗಿರಣ ಪ್ರಕಾಶನ
ಬೆಲೆ: ರೂ. 120
ಫೋನ್: 7406481629

'ಯಾರಾದರೂ ನಿನಗೆ ಚಂದ್ರ ಹೇಗಿದ್ದಾನೆ ಎಂದು ಕೇಳಿದರೆ ವಿವರಿಸಲು ಹೋಗಬೇಡ. ನೇರವಾಗಿ ಚಂದ್ರನನ್ನೇ ತೋರಿಸು' ಎಂಬ ಮಾತಿದೆ. ಇದು ಕಲೆಯ ಶಕ್ತಿಯನ್ನೂ ಉದ್ದೇಶವನ್ನೂ ಸೂಕ್ಷ್ಮವಾಗಿ ಹೇಳುವ ಸಾಲು. ಕಥೆಗಾರಿಕೆಗೂ ಈ ಮಾತು ತುಂಬಾ ಚೆನ್ನಾಗಿ ಹೊಂದುತ್ತದೆ. ಇಲ್ಲಿನ ಹಲವು ಕಥೆಗಳು 'ಹೇಳುವ' ವಾಚಾಳಿಗುಣದಿಂದ ಬಡಕಲಾಗಿವೆ. ಒಂದು ಅತ್ಯುತ್ತಮ ಧ್ವನಿಶಕ್ತಿಯುಳ್ಳ ಕಥೆಯಾಗಿ ಬೆಳೆಯಬಹುದಾಗಿದ್ದ ಸಾಧ್ಯತೆಯಿದ್ದ 'ಆತ್ಮಸಾಕ್ಷಿ', ಯಾವುದೋ ಘಟನೆಯ ಸಾರಾಂಶರೂಪಿ ವರದಿಯಂತೆ ಭಾಸವಾಗುವುದು ಇದೇ 'ಹೇಳುವ' ಗುಣದಿಂದಾಗಿ. ಈ ವರದಿಗಾರಿಕೆಯ ಗುಣದಿಂದಲೇ ಪೀರಪ್ಪನ ದ್ವಂದ್ವ, ಸಂಕಟ ನಮಗೆ ಯಾರದ್ದೋ ಮಾತಿನಂತೆ ಕೇಳಿಸುತ್ತದೆ. ನಮ್ಮನ್ನು ಕಲಕುವ, ನಮ್ಮೊಳಗನ್ನು ಹಿಗ್ಗಿಸುವ ಅನುಭವವಾಗಿ ಇಳಿಯುವುದೇ ಇಲ್ಲ.

ಗಂಡ ಹೆಂಡತಿ ನಡುವಿನ ಸಂಬಂಧದಲ್ಲಿ ಉಂಟಾದ ಪಲ್ಲಟವನ್ನು ಕಥೆಗಾರ 'ಹೇಳುವ' ರೀತಿ ಹೀಗಿದೆ: 'ಆದರ್ಶ ಹುಟ್ಟಿದ ಮೇಲೆ ತನಗೆ ಯಾವುದೇ ರೀತಿಯ ಪ್ರಾಮುಖ್ಯತೆ ಕೊಡುತ್ತಿಲ್ಲ ಎಂಬ ಅಳುಕು ಅವಳ ಮನದಲ್ಲಿ ಮೊದಲಿನಿಂದಲೂ ಇತ್ತು.'